# ಬೀಜಾಲಂಕೃತ ಆರತಿ ತಟ್ಟೆ



ದೇವರಿಗೆ ವಿವಿಧ ರೀತಿಯಲ್ಲಿ ಆರತಿ ಎತ್ತುತ್ತಾರೆ. ಹಾಗೆಯೇ ಆರತಿ ತಟ್ಟೆಗಳಲ್ಲಿಯೂ ವಿಶೇಷತೆಗಳಿರುತ್ತವೆ. ಚಿತ್ರದಲ್ಲಿ ಕಾಣುವ ಹಿತ್ತಾಳೆ ತಟ್ಟೆಗಳನ್ನು ಸೌತೆಕಾಯಿ, ಮಗೇಕಾಯಿ ಮತ್ತು ಕುಂಬಳಕಾಯಿ ಬೀಜಗಳಿಂದ ಅಲಂಕರಿಸಲಾಗಿದೆ. ಹೀಗೆ ವಿವಿಧ ರೀತಿಯಲ್ಲಿ ತಟ್ಟೆಗಳಲ್ಲಿ ಇವುಗಳನ್ನು ಅಲಂಕರಿಸಿ, ದೇವರ ಆರತಿಗೆ ವಿಶೇಷ ಪೂಜೆಗಳ ಸಂದರ್ಭದಲ್ಲಿ ಬಳಸುತ್ತಾರೆ. ಈ ಆರತಿ ತಟ್ಟೆಗಳನ್ನು ಸುಂದರವಾಗಿ ಅಲಂಕರಿಸಿದವರು ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲೂಕಿನ ಸುಮಾ ಸದಾಶಿವರಾವ್ ಅವರು.

**ಚಿತ್ರ-ಬರಹ: ಸುಘೋಷ ಎಸ್. ನಿಗಳೆ, ಬೆಂಗಳೂರು**



# 3-ಡಿ ಚಿತ್ರ ರಂಜನೆ

ಇತ್ತೀಚೆಗೆ ನಡೆದ ಉಡುಪಿ ಉತ್ಸವದಲ್ಲಿ ಗಮನ ಸೆಳೆಯುವ 3-ಡಿ ಚಿತ್ರರಂಜನೆಯ ಗ್ಯಾಲರಿಯೊಂದನ್ನು ತೆರೆದಿದ್ದರು. ಅಬ್ದುಲ್ ಕಲಾಂ ಗಿಡ ನೀಡುವುದು, ಒಬಾಮಾರೊಂದಿಗೆ ಹಸ್ತಲಾಘವ, ಮದರ್ ತೆರೆಸಾ ಆಶೀರ್ವಾದ, ಆನೆ ನೀರು ಸಿಂಪಡಿಸುವುದು, ಹಸುವಿನ ಹಾಲು ಕರೆಯುವುದು, ಭರತನಾಟ್ಯಕ್ಕೆ 14 ಕೈಗಳ ಜೋಡಣೆ ಮುಂತಾದ 27 ಬಗೆಯ ಮೂರು ಆಯಾಮದ ಚಿತ್ರಗಳಿದ್ದವು. ವೀಕ್ಷಕರ ಎತ್ತರಕ್ಕೆ ಸರಿ ಹೊಂದುವ ಪೈಂಟಿಂಗ್‌ಗಳು ಸೆಲ್ಫಿ ಚಿತ್ರಾಕರ್ಷಣೆಯಾಗಿದ್ದವು. ಚಿತ್ರಕಲೆಗೆ ಎಂತಹ ಆಯಸ್ಕಾಂತ ಶಕ್ತಿ ಇದೆ ಎಂಬುದು ಇಲ್ಲಿ ಸಾಬೀತಾಗಿದೆ !

**-ಜೀವನ್ ಶೆಟ್ಟಿ, ಉಡುಪಿ**

# ಬಾರಕೂರಿನ ಕಲ್ಲಚಪ್ಪರ

ಕರಾವಳಿಯಲ್ಲಿನ ಇತಿಹಾಸ ಪ್ರಸಿದ್ಧವಾದ ಬಾರಕೂರು, ನೂರಾರು ವರ್ಷಗಳ ಕಾಲ ಪ್ರಮುಖ ರಾಜರ ರಾಜಧಾನಿಯಾಗಿ ಹೆಸರುವಾಸಿಯಾಗಿತ್ತು.

ಅಂದಿನ ಕಾಲದಲ್ಲಿ, ಇಲ್ಲಿ ಕಾಣುವ ಎತ್ತರದ ಮಂಟಪದಲ್ಲಿ ಕುಳಿತು ರಾಜನು, ಪ್ರಜೆಗಳ ಅಹವಾಲುಗಳನ್ನು ಕೇಳುತ್ತಿದ್ದನಂತೆ. ನ್ಯಾಯವನ್ನು ಕೇಳಲು ಬರುತ್ತಿದ್ದವರ ಹೇಳಿಕೆಗಳನ್ನು ಸೂಕ್ತವಾಗಿ ಗ್ರಹಿಸಿ, ತನ್ನ ಪ್ರಬುದ್ಧ ತೀರ್ಪನ್ನು ಪ್ರಜೆಗಳ ಸಮ್ಮುಖದಲ್ಲಿಯೇ ನೀಡಿ, ಪಾರದರ್ಶಕತೆಯನ್ನು ಮೆರೆಯುತ್ತಿದ್ದರಂತೆ. ಅಂದಿನ ನ್ಯಾಯ ಪೀಠವೇ ಇಲ್ಲಿ ಕಾಣುತ್ತಿರುವ ಇಂದಿನ ಕಲ್ಲ ಚಪ್ಪರ.

ನೂರಾರು ವರ್ಷಗಳ ಐತಿಹಾಸಿಕ ಏಳು ಬೀಳುಗಳಿಗೆ, ಬದಲಾವಣೆಗೆ ಮೂಕ ಸಾಕ್ಷಿಯಾಗಿರುವ ಈ ಸ್ಮಾರಕದ ಬಗ್ಗೆ ಹೆಚ್ಚಿನ ಸಂಶೋಧನೆಯತ್ತ ಇತ್ತೀಚೆಗೆ ಕೆಲವರಾದರೂ ಯುವಜನರು ಆಸಕ್ತಿಯನ್ನು ತೋರುತ್ತಿರುವುದು ಸಂತಸದ ವಿಷಯ.

**-ರಮೇಶ್ ಬಿ.ಎಂ., ಉಡುಪಿ**

